ತುಮಕೂರು ಜಿಲ್ಲೆಯಲ್ಲಿ ಬಗರ್ ಹುಕುಂ ಭೂ ಸಾಗುವಳಿ

೯೬೮೮ ಶ್ರೀ ಬಿ. ಎಸ್. ಚಂದ್ರಶೇಖರಯ್ಯ (ತಿಪಟೂರು).—ಈ ಕೆಳಗಿನ ಪ್ರಶ್ನೆಗಳಿಗೆ ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ತುಮಕೂರು ಜಿಲ್ಲೆಯಲ್ಲಿ ಅರಣ್ಯ ಅಧಿಕಾರಿಗಳಿಂದ ಸಣ್ಣ ಮತ್ತು ಬಡ ರೈತರಿಂದ ಬಗರ್ ಹುಕ್ಕುಂ ಸಾಗುವಳಿ ೧೦-೧೫ ವರ್ಷಗಳಿಂದ ಮಾಡುತ್ತಿದ್ದು, ಅವರನ್ನು ಅರಣ್ಯ ಅಧಿಕಾರಿಗಳು ಹೊರ ಹಾಕಲು ಪ್ರಯತ್ನ ಮಾಡುತ್ತಿರುವುದರಿಂದ ಬಹಳಷ್ಟು ಜನಕ್ಕೆ ಕಿರುಕುಳ ಆಗುತ್ತಾ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಬಡ ಮತ್ತು ಸಣ್ಣ ರೈತರಿಗೆ ತೊಂದರೆ ತಪ್ಪಿಸಲು ಸರ್ಕಾರದವರು ಏನು ಕ್ರಮ ಕೈಗೊಂಡಿರುವರು ?

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿಯವರು).—

ಅ) ಇಲ್ಲ.

ಆ) ಉದ ವಿಸಂವುದಿಲ್ಲ.

ಶ್ರೀ ಬಿ. ಎಸ್. ಚಂದ್ರಶೇಖರಯ್ಯ.—ಹಳ್ಳಿಗಳಲ್ಲಿ ಮತ್ತು ತಾಲೂಕು ಹೆಡ್‌ಕ್ವಾರ್ಟರ್ಸ್‌ಗಳಲ್ಲಿ ಅನೇಕ ಕಡೆ ಅಧಿಕಾರಿವರ್ಗದವರು ಮತ್ತು ನೌಕರರು ಬಡರೈತರು ಸಾಗುವಳಿ ಮಾಡುತ್ತಿರುವ ಜಾಗದಲ್ಲಿ ಕಾಡನ್ನು ಮಾಡಲು ಸಣ್ಣಪುಟ್ಟ ಗಿಡಗಳನ್ನು ಹಾಕುವುದಕ್ಕೆ ಸ್ಥಳೀಯ ಕೆಲಸಗಾರರ ಸಹಾಯ ಪಡೆದು ಬಹಳ ತೊಂದರೆ ಕೊಡುತ್ತಿದ್ದಾರೆ. ೧೦-೧೫ ವರ್ಷಗಳಿಂದ ಅವರು ಅಲ್ಲಿ ವ್ಯವಸಾಯ ಮಾಡಿಕೊಂಡಿದ್ದಾರೆ. ಬೇರೆ ಜಾಗ ಬೇಕಾದಷ್ಟು ಇದೆ. ಅಲ್ಲಿ ಕಾಡು ಬೆಳೆಸಬಹುದು, ಇದರ ಬಗ್ಗೆ ಸರ್ಕಾರ ಗಮನ ಕೊಡುತ್ತದೆಯೆ ?

ಶ್ರೀ ಬಿ. ಎ. ಜೀವಿಜಯ (ಅರಣ್ಯ ಖಾತೆಯ ರಾಜ್ಯ ಸಚಿವರು).—ಈಗ ಅರಣ್ಯ ಬೆಳೆಸಬೇಕೆಂದು ಎಲ್ಲರೂ ಹೇಳುತ್ತಿದ್ದಾರೆ. ತುಮಕೂರು ಜಿಲ್ಲೆಯಲ್ಲಿ ಅರಣ್ಯ ಪ್ರದೇಶ ಇರುವುದು ೭-೮ ಪರ್ಸೆಂಟ್ ಅಷ್ಟೆ. ಅಲ್ಲಿ ಹೆಚ್ಚಿನ ಅರಣ್ಯ ಪ್ರದೇಶ ಇಲ್ಲ. ೧೯೭೮ನೇ ಇಸವಿಗಿಂತ ಮುಂಚೆ ತುಮಕೂರು ಜಿಲ್ಲೆಯಲ್ಲಿ, ತುಮಕೂರುಳಲ್ಲಿ, ಮಧುಗಿರಿ ೬೨, ಹುಲಿರಾಯನದುರ್ಗ ೫೨ ಹೀಗೆ ಒಟ್ಟು ೫೮೦ ಎಕರೆ ಒತ್ತುವರಿ ಜಮೀನು ಇತ್ತು. ೧೯೭೮ನೇ ಇಸವಿಗಿಂತ ಮೊದಲು ಏನು ಅತಿಕ್ರಮಣ ಜಮೀನು ಇತ್ತು, ಅಂಥ ವರನ್ನು ಬಿಡಿಸಲಿಕ್ಕೆ ನಾವು ಹೋಗುವುದಿಲ್ಲ. ೧೯೭೮ರ ತದನಂತರ ಏನು ಎನ್‌ಕ್ರೋಚ್‌ಮೆಂಟ್ ಆಗಿದೆ, ಅಲ್ಲಿ ಮಾತ್ರ ನಮ್ಮ ಇಲಾಖೆಯವರು ಗಿಡಗಳನ್ನು ಹಾಕಲಿಕ್ಕೆ ಪ್ರಯತ್ನ ಪಡುತ್ತಿದ್ದಾರೆ.

ಭದ್ರಾ ಪ್ರಾಜೆಕ್ಟಿಗೆ ಮೀಸಲಿಟ್ಟಿರುವ ಹಣ.

೧೨೫೩ ಶ್ರೀ ಬಿ. ಜಿ. ಕೊಟ್ರಪ್ಪ. (ಹರಿಹರ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಲೋಕೋಪಯೋಗಿ ಜಲಾನಯನ ಪ್ರಾದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ?

ಅ) ಭದ್ರಾ ಪ್ರಾಜೆಕ್ಟ್‌ನ ಕಾಡಾ ಯೋಜನೆಗೆ ೧೯೮೫-೮೬ನೇ ಸಾಲಿನ ಆಯವ್ಯಯದಲ್ಲಿ ಅತ್ಯಲ್ಪ ಹಣ ಒದಗಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಸದರೀ ಯೋಜನೆಗೆ ಹೆಚ್ಚು ಹಣ ಒದಗಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ;

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಜಲಾನಯನ ಹಾಗೂ ನೀರಾವರಿ ಮಂತ್ರಿಗಳು).—

ಅ) ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಸಾಧ್ಯವಾಗಲಾರದು.